ಕೊಡತಕ್ಕವರು ರೆವಿನ್ಯೂ ಮಂತ್ರಿಗಳು ಅವರು ಉತ್ತರ ಕೊಡಬೇಕು. ಮುಂದಿನ ವಾರದಲ್ಲಿ ಉತ್ತರ ಕೊಡುತ್ತಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ಲಾಂಛನದ ಬದಲಾವಣೆ

356 (175): ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಲಾಂಛನವು ಎಷ್ಟು ವರ್ಷಗಳಿಂದ ಬಳಕೆಯಲ್ಲಿದೆ;

ಆ) ಈ ಲಾಂಛನವು ಯಾರ ಕಾಲದ ಆಡಳಿತದಿಂದ ಜಾರಿಯಲ್ಲಿದೆ;

ಇ) ಈ ಲಾಂಛನವನ್ನು ಬದಲಾಯಿಸಲು ಸರ್ಕಾರ ಏನಾದರೂ ನಿರ್ಣಯ ತೆಗೆದುಕೊಂಡಿದೆಯೇ;

ಈ) ಯಾವ ಕಾರಣಕ್ಕಾಗಿ ಈ ಲಾಂಛನವನ್ನು ಬದಲಾಯಿಸಲಾಗುತ್ತಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) 45 ವರ್ಷಗಳಿಂದ ಬಳಕೆಯಲ್ಲಿದೆ.

ಆ) 1949ರಲ್ಲಿ ಅಂದಿನ ಪ್ರಥಮ ಮಹಾಪೌರರಾದ ಶ್ರೀ ಆರ್. ಸುಬ್ಬಣ್ಣ ಅವರ ಕಾಲದಿಂದ ಜಾರಿಯಲ್ಲಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಣ್ಣ:– ಮಾನ್ಯ ಅಧ್ಯಕ್ಷರೆ, ಮಹಾನಗರಪಾಲಿಕೆ ಬೆಂಗಳೂರು ಇವರು ಉಪಯೋಗಿಸತಕ್ಕ ಲಾಂಛನ ಎಷ್ಟು ವರ್ಷಗಳಿಂದ ಬಳಕೆಯಲ್ಲಿದೆ ? ಎಂದು ಕೇಳಿದ್ದಕ್ಕೆ ಅದು 45 ವರ್ಷಗಳಿಂದ ಬಳಕೆಯಲ್ಲಿದೆಯೆಂದು ಹೇಳಿದ್ದಾರೆ. ಇದನ್ನು ಬದಲಾವಣೆ ಮಾಡಲಿಕ್ಕೆ ಸರ್ಕಾರ ಏನಾದರೂ ನಿರ್ಣಯ ಮಾಡಿದೆಯೇ ಎಂದು ಕೇಳಿದ್ದೆ. ಅದು ಇದೆಯೆಂದು ಹೇಳಿದ್ದಾರೆ. ಆದರೆ ನಿರ್ಣಯವನ್ನು ಸರ್ಕಾರ ಮಾಡುವುದಿಲ್ಲ. ಬೆಂಗಳೂರು ಮಹಾನಗರಪಾಲಿಕೆಯಲ್ಲಿ ನಿರ್ಣಯ ಆಗುತ್ತದೆ ಆಮೇಲೆ ಅದು ಸರ್ಕಾರಕ್ಕೆ ಬರುತ್ತದೆ. ಕೆಂಪೇಗೌಡರು ಕಟ್ಟಿಸಿದಂತಹ ಬೆಂಗಳೂರು ನಗರ ಅವರ ಕೀರ್ತಿಗೆ ಇರತಕ್ಕ ಅವರ ಗುರುತಿನ ಲಾಂಛನ ಅದು ಬಹಳ ಐತಿಹಾಸಿಕವಾದ ಲಾಂಛನ, ಇದನ್ನು ಬದಲಾವಣೆ ಮಾಡಬೇಕೆಂದು ಮಹಾನಗರ ಪಾಲಿಕೆಯಿಂದ ಏನಾದರೂ ನಿರ್ಣಯ ಬಂದಿದ್ದರೆ ಅಥವಾ ಬಂದರೆ ಅದನ್ನು ಒಪ್ಪುವಾರದೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಕೆಂಪೇಗೌಡರ ಲಾಂಛನ ಬಹಳ ಹಳೆಯದಾದದ್ದು ಅದು ಪ್ರಸಿದ್ಧಿಯಾದದ್ದು ಇದೆ. ಅದು 45 ವರ್ಷಗಳಿಂದ ಬಳಕೆಯಲ್ಲಿದೆ. ಅದನ್ನು ಬದಲಾವಣೆ ಮಾಡತಕ್ಕ ಕ್ರಮ ಸರಿಯಲ್ಲವೆಂದು ಮತ್ತೊಮ್ಮೆ ತಮ್ಮ ಮುಖಾಂತರ ಮಾನ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ:– ಮಾನ್ಯ ಸಭಾಧ್ಯಕ್ಷರೇ, ಇದು ಗುರುತರವಾದ ವಿಚಾರವಾಗಿದೆ, ಅಷ್ಟೇ ಗಂಭೀರವಾದದ್ದು ಆಗಿದೆಯೆಂದು ನಾನು ಪರಿಗಣಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಲಾಂಛನವನ್ನು ಬದಲಾವಣೆ ಮಾಡುವುದಕ್ಕೆ ನಿಮಗೇನು ? ಇದು ಕೆಂಪೇಗೌಡರ ಕಾಲದಿಂದ ಬಂದಿರತಕ್ಕದ್ದು. ಅದು ಇತಿಹಾಸ ಪ್ರಸಿದ್ಧವಾದದ್ದು. ಅದನ್ನು ಏಕದಂ ಬದಲಾವಣೆ ಮಾಡುವುದಕ್ಕೆ ಹೊರಟರೆ ಸರ್ಕಾರದ ವಿರುದ್ಧ ಯುದ್ಧವಾಗುತ್ತದೆ.

ಯಾವ ಕಾರಣಕ್ಕೂ ಇದು ಸರಿಯಲ್ಲ. ತಾವು ಅಷ್ಟು ಸುಲಭವಾಗಿ ಲಾಂಛನ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಸದನದಲ್ಲಿ ಸ್ಪಷ್ಟವಾಗಿ ಹೇಳಬೇಕು ನಾವು ಬದಲಾವಣೆ ಮಾಡುವುದಿಲ್ಲವೆಂದು. ಇಲ್ಲ ಉಂಟು ಅಂತ ಅದನ್ನು ಹೇಳಿ. ಮುಂದಿನ ಕ್ರಮ ನಾವು ಹೇಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರಕ್ಕೆ ದೊಡ್ಡ ಇತಿಹಾಸವಿದೆ ಇದು ಕೆಂಪೇಗೌಡ ಕಟ್ಟಿಸಿರತಕ್ಕ ನಗರ. It is very sensational and emotional issue. ಬೆಂಗಳೂರು ಬಸ್ ಸ್ಟ್ಯಾಂಡ್‌ಗೆ ಕೆಂಪೇಗೌಡರ ಹೆಸರು ಇಡಬೇಕೆಂದು ಇದ್ದರೆ ಅದನ್ನು ಇಂಪ್ಲಿಮೆಂಟ್ ಮಾಡದಿರುವ ಇವರು ಇರುವ ನಾಮಫಲಕ ಚೇಂಜ್ ಮಾಡುತ್ತೇವೆಂದರೆ ಅರ್ಥವೇನು ? ಇಂತಹವನ್ನಕ್ಕೆ ತಾವು ಅವಕಾಶ ಕೊಡಬಾರದು ?

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಇದು ಅಷ್ಟು ಸುಲಭವಾದ ಇಷ್ಯೂ ಅಲ್ಲ. ಇದು ಸೆನ್ಸೇಷನ್, ಹಾಗೂ ಎಮೋಷನಲ್ ಇಷ್ಯೂ. ಸಾಧ್ಯವಾದರೆ ಮೇಯರ್‌ರವರನ್ನು ಕರೆಯಿಸಿ ಮಾತನಾಡಿ.

ಶ್ರೀ ಪಾಟಾಳ್ ನಾಗರಾಜ್:– ಮಾತನಾಡುವುದು ಏನಿದೆ ? ಒಳ್ಳೆಯದಾಗುವುದಿಲ್ಲ ಸ್ವಾಮಿ ಇದು ಒಳ್ಳೆಯದಲ್ಲ ಸರಿಯಲ್ಲ. ಶತಶತಮಾನಗಳ ಕಾಲದಿಂದ ಪ್ರಸಿದ್ಧಿಯಾಗಿ ಬಂದಿರತಕ್ಕ ಕೆಂಪೇಗೌಡರ ಸ್ಮಾರಕವ ಗುರುತನ್ನು ಬದಲಾವಣೆ ಮಾಡಿ, ಅವರು ಇಚ್ಛೆ ಬಂದ ಹಾಗೆ ಮಾಡುತ್ತಾ ಹೋದರೆ ನಾವು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:– ಆಗಕೂಡದು, ಆಗಕೂಡದು

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಮೇಯರ್ ಅವರಿಗೆ ತಾವು ಈ ಸದನದ ಅಭಿಪ್ರಾಯ ತಿಳಿದುಕೊಂಡು ಇವತ್ತೇ ಪತ್ರ ಬರೆಯುಬೇಕು, ಸೂಚನೆ ಕೊಡಬೇಕು. ಈ ತರಹ ಏನು ಕೆಲಸ ಮಾಡುವುದಕ್ಕೆ ಹೊರಟಿದ್ದರೆ, ಅದಕ್ಕೆ ಇನ್ನು ಮುಂದೆ ಕೈಹಾಕಬಾರದು. ಅದನ್ನು ಕೈಬಿಡಬೇಕು ಮತ್ತು ಯಾವುದೇ ಕಾರಣಕ್ಕೆ ಗೊಂದಲಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವಂಥ ತಿಳುವಳಿಕೆಯನ್ನು ಅವರಿಗೆ ನೀಡಬೇಕು ಮತ್ತು ಈ ರೀತಿ ಆಗದ ಹಾಗೆ ವಾರ್ನ್ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ:– ಸರ್ಕಾರದ ಮನಸ್ಸಿನಲ್ಲಿ ಇಂಥ ವಿಚಾರ ಏಕೆ ಬಂತು, ಇಂತಹ ವಿಚಾರ ಮನಸ್ಸಿನಲ್ಲಿ ಬರಬೇಕಾದರೆ ನೀವು ಪಾಪ ಮಾಡಿದ ಹಾಗೆ. ಛಿದ್ರವಾಗಿ ದಯವಾಡಿ ಅಂತಹ ಕೆಲಸ ಮಾಡುವುದಕ್ಕೆ ಹೋಗಬೇಡಿ. ಸ್ಪಷ್ಟವಾಗಿ ಮಾಡುವುದಿಲ್ಲ ಎಂದು ಹೇಳಿ. ಇದರಲ್ಲಿ ಸೆಂಟಿಮೆಂಟಲ್ ಕೂಡ ಅಟ್ಯಾಚ್ ಆಗಿದೆ.

ಶ್ರೀ ಚೌಡರೆಡ್ಡಿ:– ಅಧ್ಯಕ್ಷರೇ, ಈ ವಿಚಾರ ನಗರಪಾಲಿಕೆಯಲ್ಲಿ ಏನು ನಡೆದಿದೆ ಅದು ನಮಗಂತೂ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಗೊತ್ತಿಲ್ಲ ಎಂದರೆ ಹೇಗೆ ಸ್ವಾಮಿ ? ನಗರಾಭಿವೃದ್ಧಿ ಮಂತ್ರಿಯಾಗಿ ನೀವು ಇಲ್ಲಿ ಇರುವುದು ಏಕೆ ? ತಮಗೆ ಗೊತ್ತಾಗಲಿಲ್ಲ ಎಂದರೆ ಹೇಗೆ ? ನಿಮಗೆ ಗೊತ್ತಾಗಬೇಕು. ಇದು ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ವರದಿಯಾಗಿ ಒಂದು ತಿಂಗಳಾಗಿದೆ. ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಏಕೆ ಉತ್ತರ ಕೊಡುತ್ತೀರಿ ? ನನಗೆ ಗೊತ್ತಿಲ್ಲ ಎಂದು ಹೇಳಿ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಕೆಂಪೇಗೌಡನ ಹೆಸರಿನ ಲಾಂಛನವನ್ನು ಬೆಂಗಳೂರು ನಗರಪಾಲಿಕೆಯಲ್ಲಿ ಬದಲಾವಣೆ ಮಾಡಬೇಕೆನ್ನುವುದು ಅಲ್ಲಿ ಚರ್ಚೆಯಾಗಿದೆ. ತಮ್ಮ ಮಂತ್ರಿಗಳು ಹೇಳುತ್ತಾರೆ ಇದರ ಬಗ್ಗೆ ತಮಗೆ ಏನೂ ಗೊತ್ತಿಲ್ಲ ಎಂದು. ನಾವಾದರೂ ಹೇಳುತ್ತೇವೆ, ಇದು ಐತಿಹಾಸಿಕವಾದ ನಗರ. ನೂರಾರು ವರ್ಷಗಳ ಇತಿಹಾಸ ಇದೆ. ಇದು ಬಹಳ ಸೆನ್ಸೇಶನಲ್ ಮತ್ತು ಎಮೋಶನಲ್ ಇಶ್ಯು. ಸರ್ಕಾರ ಇದರ ಬಗ್ಗೆ

ಯಾವುದೇ ಕಾರಣದಿಂದ ಸಹಿತ ಬದಲಾವಣೆ ಮಾಡತಕ್ಕಂಥ ವಿಚಾರ ಇಲ್ಲವೆಂದು ಸ್ಪಷ್ಟ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನ ಸ್ಥಾಪಕ ಕೆಂಪೇಗೌಡರ ಗೋಪುರ ಬೆಂಗಳೂರಿನ ನಾಲ್ಕು ಕಡೆಗಳಲ್ಲಿವೆ. ಆ ಗೋಪುರಕ್ಕೆ ಅಪಾಯ ಒದಗಿದೆ. ತಮಗೆ ಹೇಳುವುದಾದರೆ ಬಳ್ಳಾರಿ ರಸ್ತೆಯಲ್ಲಿರುವ ಗೋಪುರದ ಬಗ್ಗೆ ದೊಡ್ಡ ಹೋರಾಟ ಆಯಿತು. ಅದನ್ನು ರಮಣಮಹರ್ಷಿ ಆಶ್ರಮಕ್ಕೆ ಕೊಟ್ಟು ವಿಕಾರ ಮಾಡತಕ್ಕಂಥ ತಂತ್ರ ಕೂಡ ನಡೆಯಿತು. ಇವತ್ತು ಬೆಂಗಳೂರಿನ ಪುರಸಭೆಯಿಂದ ಹಿಡಿದು ಮಹಾನಗರಪಾಲಿಕೆವರೆಗೂ ಇರತಕ್ಕಂಥ ಲಾಂಛನ ಕೆಂಪೇಗೌಡರ ಸ್ಮಾರಕವಾಗಿ ಉಳಿದಿರತಕ್ಕಂಥ ಲಾಂಛನ. ಅದನ್ನು ಬದಲಾವಣೆ ಮಾಡಿ ಹೊಸ ಲಾಂಛನ ಇರತಕ್ಕಂಥ ಯೋಚನೆ ಸರ್ಕಾರಕ್ಕೆ ಮತ್ತು ಮಹಾನಗರಪಾಲಿಕೆಗೆ ಇದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇಂತಹ ಪರಿಸ್ಥಿತಿ ಉದ್ಭವವಾಗುವುದಾದರೆ ಇದು ಬಹಳ ಗಂಭೀರವಾದ ಪರಿಸ್ಥಿತಿ ಆಗುತ್ತದೆ. ಇದು ಬೆಂಗಳೂರು ಒಂದೇ ಅಲ್ಲ, ರಾಜ್ಯದಲ್ಲಿ ಒಂದು ದೊಡ್ಡ ಕ್ಷೋಭೆ ಪ್ರಾರಂಭವಾಗುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ದಯವಿಟ್ಟು ಸ್ಪಷ್ಟವಾಗಿ ಹೇಳಿ. ಕೆಂಪೇಗೌಡರ ಲಾಂಛನವನ್ನು ಬದಲಾವಣೆ ಮಾಡುವುದಿಲ್ಲ, ಇದನ್ನೇ ಇಟ್ಟುಕೊಳ್ಳುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ವೇಶಪಾಂಡೆ:– ಇಲ್ಲಿ ಸೆಂಟಿಮೆಂಟ್ಸ್ ಕೂಡ ಅಟ್ಯಾಚ್ ಆಗಿದೆ. ಹಾಗಾಗಿ ಈ ತರಹ ವಿಚಾರ ಏಕೆ ಬರಬೇಕು ? ಲಾಂಛನ ಬದಲಾವಣೆ ಮಾಡುವ ವಿಚಾರ ಕಾರ್ಪೊರೇಷನ್‌ನಲ್ಲಿ ಏಕೆ ಬರಬೇಕು ? ಅಥವಾ ಸರ್ಕಾರಕ್ಕೆ ಆದರೂ ಏಕೆ ಬರಬೇಕು ಎಂದು ನಮಗೆ ಗೊತ್ತಾಗುತ್ತಾ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸರ್ಕಾರಕ್ಕೆ ಬಂದಿಲ್ಲ. ಈ ವಿಚಾರದಲ್ಲಿ ಮಹಾನಗರಪಾಲಿಕೆಯ ಸಭೆಯಲ್ಲಿ ಚರ್ಚೆಯಲ್ಲಿ ಬಂದಿತ್ತೇ ಹೊರತು, ನಮಗೆ ಬಂದಿರುವ ವರ್ತಮಾನದ ಪ್ರಕಾರ, ಲಾಂಛನ ಬದಲಾವಣೆ ಮಾಡಬೇಕೆಂದು ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಆ ಸಭೆಯಲ್ಲಿ ಇದು ಚರ್ಚೆಯಾಗಿದೆಯೇ ಹೊರತು ಯಾವುದೇ ರೀತಿಯಲ್ಲಿ ನಿರ್ಣಯ ತೆಗೆದುಕೊಂಡಿಲ್ಲ. ನಿರ್ಣಯ ತೆಗೆದುಕೊಳ್ಳಬೇಕಾಗಿರುವುದರಿಂದ ಅದು ಸರ್ಕಾರದ ಗಮನಕ್ಕೆ ಕೂಡ ಬಂದಿಲ್ಲ. ಆ ತರಹ ರೆಸ್ಯೂಲ್ಯೇಷನ್ ಇಲ್ಲವೇ ಇಲ್ಲ. ಆದ್ದರಿಂದ ಅವರು ಆ ಅರ್ಥದಲ್ಲಿ ಹೇಳಿದ್ದಾರೆ. ಅದರ ಉದ್ದೇಶ ಕೂಡ ಅಷ್ಟೇ. ಲಾಂಛನ ಪ್ರಮುಖವಾದದ್ದು, ಏಕೆಂದರೆ ಇದಕ್ಕೆ ಒಂದು ಪವಿತ್ರತೆ ಇರುತ್ತದೆ. ನಾವು ಮನಸ್ಸೇಚ್ಛೆಯಾಗಿ ಇಂತಹ ಲಾಂಛನಗಳನ್ನು ಬದಲಾವಣೆ ಮಾಡುವುದಕ್ಕೆ ನಮ್ಮ ಪ್ರೋತ್ಸಾಹ ಕೂಡ ಇಲ್ಲ, ಅದಕ್ಕೆ ಬೆಂಬಲ ಕೂಡ ಇಲ್ಲ. ಆದ್ದರಿಂದ ಈ ಬಗ್ಗೆ ಯಾವುದೇ ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಕೆ. ಲಕ್ಕಣ್ಣ:– ಇದರ ಬಗ್ಗೆ ಕಾರ್ಪೊರೇಷನ್ ನಿರ್ಣಯ ಮಾಡಿತ್ತು. ಸಾರ್ವಜನಿಕರು ವಿರೋಧ ಮಾಡಿದ್ದರಿಂದ ಹಾಗೆಯೇ ಇಟ್ಟಿದ್ದಾರೆ. ಮತ್ತೆ ಅವರು ನಿರ್ಣಯ ಮಾಡಿ ಕಳುಹಿಸಿದರೇ !

ಅಧ್ಯಕ್ಷರು:– ಮುಖ್ಯಮಂತ್ರಿಯವರು ಹೇಳಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್:– ಆ ರೀತಿ ನಿರ್ಣಯ ಮಾಡುವುದಕ್ಕೆ ನಗರಪಾಲಿಕೆಗೆ ಅಧಿಕಾರ ಇಲ್ಲ.

ಆ ರೀತಿ ನಿರ್ಣಯ ಬಂದರೆ ನಗರಪಾಲಿಕೆಯನ್ನು ನೀವು ವಜಾ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಆ ರೀತಿ ನಿರ್ಣಯ ಬಂದರೂ ಕೂಡ ಒಪ್ಪುವಂಥ ಪ್ರಶ್ನೆ ಇಲ್ಲ.